8. ಗ್ರಾಫೈಟ್	ರೂ.225 ಪ್ರತಿ ಟನ್ನಿಗೆ
9. ಐರನ್ ಓರ್	
1) ಲಂಪ್ಸ್	ಶೇ.65 ಅಥವಾ ಹೆಚ್ಚಿನ ಕಬ್ಬಿಣಾಂಶ – ರೂ.27
	ಶೇ. 62 ರಿಂದ 65 ಕಬ್ಬಿಣಾಂಶ – ರೂ.16
	ಶೇ. 62ಕ್ಕೆ ಕಡಿಮೆ ಕಬ್ಬಿಣಾಂಶ – ರೂ.11
2) ಫೈನ್ಸ್	ಶೇ.65 ಅಥವಾ ಹೆಚ್ಚಿನ ಕಬ್ಬಿಣಾಂಶ – ರೂ.19
	ಶೇ. 62 ರಿಂದ 65 ಕಬ್ಬಿಣಾಂಶ – ರೂ.11
	ಶೇ. 62ಕ್ಕೆ ಕಡಿಮೆ ಕಬ್ಬಿಣಾಂಶ – ರೂ.8
3) ಕಾನ್ ಸೆಂಟ್ರೇಟ್	ಶೇ. 40ಕ್ಕೆ ಕಡಿಮೆ – ರೂ.4
10) ಕಯನೈಟ್	ಮಾರಾಟದ ಬೆಲೆಯ ಮೇಲೆ ಶೇ 10 ರಂತೆ
11) ಲೈಂ ಸ್ಟೋನ್1	ರೂ. 45 ಪ್ರತಿ ಟನ್ನಿಗೆ
12) ಲೈಂ ಷೆಲ್	ರೂ. 45 ಪ್ರತಿ ಟನ್ನಿಗೆ
13) ಮ್ಯಾಗ್ನಸೈಟ್	ಮಾರಾಟದ ಬೆಲೆಯ ಮೇಲೆ ಶೇ3 ರಂತೆ
14) ಮ್ಯಾಂಗನೀಸ್	ಮಾರಾಟದ ಬೆಲೆಯ ಮೇಲೆ ಶೇ3 ರಂತೆ
15) ಕ್ವಾರ್ಟ್ಜ್, ಮೌಲ್ಡಿಂಗ್ ಸ್ಯಾಂಡ್, ಸಿಲಿಕಾ ಸ್ಯಾಂಡ್, ಕ್ವಾರ್ಟ್ಜೈಟ್.	ರೂ. 20/– ಪ್ರತಿ ಟನ್ನಿಗೆ
16) ಬೆಳ್ಳಿ	ಲಂಡನ್ ಪ್ರೈಸ್ ಆಧಾರದಮೇಲೆ ಶೇ.5 ರಂತೆ
17) ಸೋಪ್ ಸ್ಟೋನ್	ಮಾರಾಟದ ಬೆಲೆಯ ಮೇಲೆ ಶೇ15 ರಂತೆ
18) ವರ್ಮಕೈಲೈಟ್	ಮಾರಾಟದ ಬೆಲೆಯ ಮೇಲೆ ಶೇ 3 ರಂತೆ
19) ಇತರೆ ಖನಿಜಗಳು	ಮಾರಾಟದ ಬೆಲೆಯ ಮೇಲೆ ಶೇ 10 ರಂತೆ

3574 (4550)– ಶ್ರೀ ಮಲ್ಲಿಕಾರ್ಜುನ ಸಿದ್ದರಾಮಪ್ಪ ಖೂಬ (ಬಸವಕಲ್ಯಾಣ)– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್‌ನಲ್ಲಿ ಇರುವ ಅಗ್ನಿಶಾಮಕ ಠಾಣೆಗಳ ಸಂಖ್ಯೆ ಎಷ್ಟು ; ಇವು ಯಾವ ಯಾವ ಸ್ಥಳಗಳಲ್ಲಿ ಇವೆ ;

ಆ) ಈ ಅಗ್ನಿ ಶಾಮಕ ಠಾಣೆಗಳಿಗೆ ಒದಗಿಸಲಾಗಿರುವ ವಾಹನ ಮತ್ತು ಸಿಬ್ಬಂದಿ ಸಂಖ್ಯೆ ಎಷ್ಟು ;

ಇ) ನಿಯಮಗಳ ಪ್ರಕಾರ ಪ್ರತಿಠಾಣೆಗೆ ಎಷ್ಟು ವಾಹನಗಳನ್ನು ಯಾವ ಆಧಾರದ ಮೇಲೆ ಒದಗಿಸಲಾಗುವುದು; ಇದರನ್ವಯ ಬಸವಕಲ್ಯಾಣದಲ್ಲಿರುವ ಠಾಣೆಗೆ ಎಷ್ಟು ವಾಹನಗಳನ್ನು ಮತ್ತು ಎಷ್ಟು ಸಿಬ್ಬಂದಿಯನ್ನು ಒದಗಿಸಲಾಗಿದೆ ಹಾಗೂ ಈಠಾಣೆ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು;

ಈ) ಬಸವಕಲ್ಯಾಣ ತಾಲ್ಲೂಕಿನಲ್ಲಿ ಸುಮಾರು 1.78 ಲಕ್ಷ ಜನಸಂಖ್ಯೆ ಇದ್ದು 114 ಹಳ್ಳಿಗಳಿದ್ದು ಸುಮರು 50 ಕಿ.ಮೀ. ವ್ಯಾಪ್ತಿ ಇದ್ದರೂ ಸಹ ಇಲ್ಲಿಗೆ ಒಂದು ಅಗ್ನಿಶಾಮಕ ವಾಹನವನ್ನು ಒದಗಿಸಿರುವುದು ನಿಜವೇ; ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ; ತುರ್ತು ಸಂದರ್ಭದಲ್ಲಿ ಹೆಚ್ಚಿನ ಅಗ್ನಿಶಾಮಕ ವಾಹನಗಳು ಅಗತ್ಯವಿರುವುದರಿಂದ ಬಸವ ಕಲ್ಯಾಣಕ್ಕೆ ಜನಸಂಖ್ಯೆ ಅನುಗುಣವಾಗಿ ಅಗತ್ಯವಿರುವ ವಾಹನ ಮತ್ತು ಸಿಬ್ಬಂದಿಯನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)–

ಅ) ಬೀದರ್ ಜಿಲ್ಲೆಯಲ್ಲಿ 5 ಅಗ್ನಿ ಶಾಮಕ ಠಾಣೆಗಳಿವೆ. ಬೀದರ್, ಬಸವಕಲ್ಯಾಣ, ಹುಮನಾಬಾದ್,ಔರಾದ್ ಮತ್ತು ಭಾಲ್ಕಿ.

ಆ) 1) ಬೀದರ್ ಅಗ್ನಿಶಾಮಕ ಠಾಣೆಯಲ್ಲಿ 2 ಜಲವಾಹನ 1 ನೀರಿನ ಲಾರಿ, 1 ಟೊಯಿಂಗ್ ಟಿಂಡರ್,1 ಟ್ರೈಲರ್ ಪಂಪ್, 1 ರೋಗಿ ವಾಹನ, 2 ಪೋರ್ಟಬಲ್‌ಪಂಪ್ ಇವೆ.

2) ಹುಮನಾಬಾದ್ ಅಗ್ನಿಶಾಮಕ ಠಾಣೆಯಲ್ಲಿ 1 ಜಲವಾಹನ 1 ಪೋರ್ಟಬಲ್ ಪಂಪ್ ಒದಗಿಸಲಾಗಿದೆ.

3) ಬಸವಕಲ್ಯಾಣ ಅಗ್ನಿಶಾಮಕ ಠಾಣೆಯಲ್ಲಿ 1 ಜಲವಾಹನ ಮತ್ತು 1 ಪೋರ್ಟಬಲ್ ಪಂಪ್ ಒದಗಿಸಲಾಗಿದೆ.

4) ಬಾಲ್ಕಿ ಅಗ್ನಿಶಾಮಕ ಠಾಣೆಯಲ್ಲಿ 1 ಜಲವಾಹನ ಮತ್ತು 1 ಪೋರ್ಟಬಲ್ ಪಂಪ್ ನಿರ್ವಹಿಸುತ್ತಿದೆ.

5) ಔರಾದ್ ಅಗ್ನಿಶಾಮಕ ಠಾಣೆಯಲ್ಲಿ 1 ಜಲವಾಹನ ಮತ್ತು 1 ಪೋರ್ಟಬಲ್ ಪಂಪ್ – ಬೀದರ್ ಅಗ್ನಿಶಾಮಕ ಠಾಣೆಯಲ್ಲಿ 1 ಜಿಲ್ಲಾ

ಅಗ್ನಿಶಾಮಕ, 4 ಪ್ರಮುಖ ಅಗ್ನಿಶಾಮಕರು, 3 ಚಾಲಕರು 19 ಅಗ್ನಿಶಾಮಕರು, ಹುಮನಾಬಾದ್ ಅಗ್ನಿಶಾಮಕಠಾಣೆಯಲ್ಲಿ 1 ಸಹಾಯಕ ಅಗ್ನಿ ಶಾಮಕ ಠಾಗಾಧಿಕಾರಿ , 4 ಪ್ರಮುಖ ಅಗ್ನಿಶಾಮಕರು, 3 ಚಾಲಕರು 9 ಅಗ್ನಿಶಾಮಕರು, ಬಸವ ಕಲ್ಯಾಣ ಅಗ್ನಿಶಾಮಕ ಠಾಣೆಯಲ್ಲಿ 1 ಸಹಾಯಕ ಅಗ್ನಿ ಶಾಮಕ ಠಾಣಾಧಿಕಾರಿ, 1 ಪ್ರಮುಖ ಅಗ್ನಿಶಾಮಕ, 3ಚಾಲಕರು 6 ಅಗ್ನಿಶಾಮಕರು, ಭಾಲ್ಕಿ ಅಗ್ನಿಶಾಮಕ ಠಾಣೆ ಯಲ್ಲಿ 1 ಸಹಾಯಕ ಅಗ್ನಿ ಶಾಮಕ ಠಾಣಾಧಿಕಾರಿ,3ಪ್ರಮುಖ ಅಗ್ನಿಶಾಮಕರು, 3 ಚಾಲಕರು, 9 ಅಗ್ನಿಶಾಮಕರು, ಹಾಗೂ ಔರಾದ್ ಅಗ್ನಿಶಾಮಕ ಠಾಣೆಯಲ್ಲಿ 1 ಸಹಾಯಕ ಅಗ್ನಿ ಶಾಮಕ ಠಾಗಾಧಿಕಾರಿ ,2 ಪ್ರಮುಖ ಅಗ್ನಿಶಾಮಕರು, 2ಚಾಲಕರು, 6 ಅಗ್ನಿಶಾಮಕರು.ಈ ಮೇಲಿನ 5 ಅಗ್ನಿಶಾಮಕ ಠಾಣೆಗಳಲ್ಲಿ ಅಧಿಕಾರಿ/ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.

ಇ) ಜಿಲ್ಲಾ ಮಟ್ಟದ ಅಗ್ನಿಶಾಮಕ ಠಾಣೆಗೆಳಿಗೆ 2 ಜಲವಾಹನ 1ನೀರಿನ ಲಾರಿ, 2 ಪೋರ್ಟಬಲ್‌ಪಂಪ್, ಮತ್ತು 1 ಎಳೆ ವಾಹನ ಒದಗಿಸಲಾಗುವುದು. ತಾಲ್ಲೂಕು ಮಟ್ಟದ ಅಗ್ನಿಶಾಮಕ ಠಾಣೆಗೆಳಿಗೆ 2 ಜಲವಾಹನ, 2 ಪೋರ್ಟಬಲ್ ಪಂಪ್‌ಗಳನ್ನು ಒದಗಿಸಲಾಗುವುದು. ಈಗ ಬಸವ ಕಲ್ಯಾಣ ಅಗ್ನಿಶಾಮಕ ಠಾಣೆಗೆ 1 ಜಲ ವಾಹನ ಪೋರ್ಟಬಲ್ ಪಂಪ್‌ನ್ನು ಒದಗಿಸಲಾಗಿದೆ. ಈಗ ಹೊಸ ಜಲವಾಹನಗಳಿಗೆ ಕವಚ ನಿರ್ಮಾಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಈ ವಾಹನಗಳನ್ನು ಕವಚ ನಿರ್ಮಾಣಗೊಳಿಸಿದ ನಂತರ ಇನ್ನೊಂದು ಜಲವಾಹವನ್ನು ಬಸವಕಲ್ಯಾಣ ಅಗ್ನಿಶಾಮಕ ಠಾಣೆಗೆ ನೀಡಲಾಗುವುದು. 27 ಹುದ್ದೆಗಳನ್ನು ಮಂಜೂರು ಮಾಡಿದ್ದು, ಸಿಬ್ಬಂದಿಗಳ ಕೊರತೆಯಿಂದಾಗಿ 1 ಸಹಾಯಕ ಅಗ್ನಿಶಾಮಕ ಠಾಗಾಧಿಕಾರಿ, 1 ಪ್ರಮುಖ ಅಗ್ನಿಶಾಮಕ, 2 ಅಗ್ನಿಶಾಮಕ ಚಾಲಕರು ಮತ್ತು 6 ಅಗ್ನಿಶಾಮಕರು ನೇಮಿಸಿದ್ದು ಹಾಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ಉಳಿದ ಖಾಲಿ ಹುದ್ದೆಗಳನ್ನು ಸಧ್ಯದಲ್ಲಿಯೇ ತುಂಬಲಾಗುವುದು.

ಈ) ತುರ್ತು ಸಂದರ್ಭಗಳಲ್ಲಿ ಬಾಲ್ಕಿ ಮತ್ತು ಹುಮನಾಬಾದ್ ಅಗ್ನಿಶಾಮಕ ಠಾಣೆಗೆಳಿಂದ ವಾಹನ ಮತ್ತು ಸಿಬ್ಬಂದಿಗಳನ್ನು ನಿಯೋಜಿಸಿ ಅಗ್ನಿಕರೆಗಳಿಗೆ ಹಾಜರಾಗಲು ವ್ಯವಸ್ಥೆಗೊಳಿಸಲಾಗಿದೆ.